## ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ. 691/2022**

**ಫ್ರಾಸಾಃ 1**

**ದಿನಾಂಕಃ 26-11-2025**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ಶಿವನಗೌಡ ರಾಯನಗೌಡ್ರ |
| ತಂದೆ/ಗಂಡನ ಹೆಸರು | ರಘುನಾಥಗೌಡ |
| ವಯಸ್ಸು | 51 ವರ್ಷ |
| ಉದ್ಯೋಗ | ಸಿ ಎಚ್ ಸಿ-896 ನರಗುಂದ ಪೊಲೀಸ್ ಠಾಣೆ |
| ವಾಸ | ನರಗುಂದ |

**ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ನಾನು ಸನ್ 2022 ರಿಂದ ಇಲ್ಲಿಯವರೆಗೆ ನರಗುಂದ ಪೊಲೀಸ್ ಠಾಣೆಯಲ್ಲಿ ಸಿ ಎಚ್ ಸಿ-896 ಅಂತಾ ಕೆಲಸ ಮಾಡುತ್ತಿದ್ದೇನೆ.

ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ, ಆರೋಪಿತನ ವಿರುದ್ಧ ಉದ್ಘೋಷಣೆ ಮತ್ತು ಆಸ್ತಿ ಜಪ್ತಿ ಕುರಿತು ವಾರೆಂಟ್ ನ್ನು ಠಾಣಾಧಿಕಾರಿಯು ದಿಃ09-07-2025 ರಂದು ನನಗೆ ನೀಡಿದ್ದು, ಆ ಪ್ರಕಾರ ಅದೇ ದಿನ ರಾತ್ರಿ ನರಗುಂದದಿಂದ ಹೊರಟು ದಿಃ10-07-2025 ರಂದು ಸೇಡಂ ಪೋಲಿಸ ಠಾಣೆಗೆ ಬೆಳಿಗ್ಗೆ 9.00 ಗಂಟೆಗೆ ತಲುಪಿರುತ್ತೇನೆ. ನಂತರ ಠಾಣೆಯಿಂದ ಹೊರಟು ಆರೋಪಿತನ ಗ್ರಾಮವಾದ ದೇವನೂರು ಗ್ರಾಮಕ್ಕೆ ಬೆಳಿಗ್ಗೆ 10.30 ಗಂಟೆಗೆ ಹೋಗಿರುತ್ತೇನೆ. ನೆರವಾಗಿ ಆರೋಪಿತನ ಮನೆಗೆ ಹೋಗಿ ವಿಚಾರಿಸಿದ್ದು ಆ ಸಮಯದಲ್ಲಿ ಆರೋಪಿತನ ಸಹೋದರನಾದ ಬ್ರಹ್ಮಾನಂದ ರೆಡ್ಡಿರವರು ಮನೆಯಲ್ಲಿ ಇದ್ದರು. ಸದರಿಯವರನ್ನು ಆರೋಪಿತನ ಬಗ್ಗೆ ವಿಚಾರಿಸಿದಾಗ ಆರೋಪಿತನು 4-5 ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿದ್ದು, ಈಗ ಎಲ್ಲಿ ವಾಸವಾಗಿದ್ದಾನೆ ಎಂಬ ಬಗ್ಗೆ ಮಾಹಿತಿ ಇಲ್ಲ

ಎಂದು ತಿಳಿಸಿರುತ್ತಾರೆ. ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಉದ್ಘೋಷಣೆ ವಾರೆಂಟ ಜಾರಿ ಮಾಡಲು ಸಹಕರಿಸುವಂತೆ ಮತ್ತು ಜಾರಿ ಸಮಯದಲ್ಲಿ ಇಬ್ಬರು ಪಂಚರ ಅವಶ್ಯಕತೆ ಇದ್ದು, ಸದರಿ ಪಂಚರನ್ನು ಹಾಜರು ಪಡಿಸುವಂತೆ ಹೇಳಿದ್ದು, ಅದಕ್ಕೆ ಅವರು ಪಂಚರಾದ ಸಂಜೀವಪ್ಪ ತಂದೆ ಆಶಾಪ್ಪ ಗುತ್ತೆದಾರ ಮತ್ತು ಮಲ್ಲಯ್ಯ ತಂದೆ ವಿರುಪಾಕ್ಷಯ್ಯ ಸ್ವಾ ಮಿ ಎನ್ನುವವರನ್ನು ಹಾಜರು ಪಡಿಸಿರುತ್ತಾರೆ. ಸದರಿ ಪಂಚರಿಗೆ ಆರೋಪಿತನ ಬಗ್ಗೆ ಮತ್ತು ಪ್ರಕರಣದ ಬಗ್ಗೆ ಮಾಹಿತಿ ನೀಡಿ, ಪಂಚನಾಮೆಗೆ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು ಅದಕ್ಕೆ ಅವರು ಒಪ್ಪಿ ಕೊಂಡಿರುತ್ತಾರೆ. ನಂತರ ಸದರಿ ಪಂಚರ ಸಮಕ್ಷಮ ಉದ್ಘೋಷಣೆ ವಾರೆಂಟನ ಪ್ರತಿಯನ್ನು ಆರೋಪಿತನ ಮನೆಗೆ ಅಂಟಿಸಿ ಒಂದು ಫೋಟೋ ಪಡೆದಿರುತ್ತೇನೆ. ಸದರಿ ಫೋಟೋವನ್ನು ನಿಪಿ 1 ಎಂದು  ಗುರುತಿಸಲಾಯಿತು. ನಂತರ ಸದರಿ ಗ್ರಾಮದ ಮಾರುತಿ ದೇವಸ್ಥಾನದ ಮುಂದೆ ಇರುವ ವಿದ್ಯುತ ಕಂಬಕ್ಕೆ , ಸಾರ್ವನಿಕರಿಗೆ ಕಾಣಿಸುವಂತೆ ಉದ್ಘೋಷಣೆ ವಾರೆಂಟನ ಇನ್ನೊಂದು ಪ್ರತಿಯನ್ನು ಅಂಟಿಸಿ ಫೋಟೋ ಪಡೆದಿರುತ್ತೇನೆ. ಸದರಿ ಫೋಟೋವನ್ನು ನಿಪಿ 2 ಎಂದು  ಗುರುತಿಸಲಾಯಿತು. ಆ ಕುರಿತು ಮಧ್ಯಾಹ್ನ 12.00-1.00 ಗಂಟೆಯವರೆಗೆ ಸದರಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿಃ 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 3(ಎ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಸದರಿ ಪಂಚರಿಗೆ , ಆರೋಪಿತನ ಸಹೋದರನಿಗೆ ಹಾಗೂ ಹಾಜರು ಇದ್ದ ಸ್ಥಳೀಯರಿಗೆ ಆರೋಪಿತನ ಬಗ್ಗೆ ಮಾಹಿತಿ ದೊರೆತಲ್ಲಿ ಕೂಡಲೇ ನರಗುಂದ ಪೋಲಿಸ ಠಾಣೆಗೆ ಅಥವಾ ಹತ್ತಿರದ ಪೋಲಿಸ ಠಾಣೆಗೆ ಮಾಹಿತಿ ನೀಡುವಂತೆ ತಿಳಿಸಿರುತ್ತೇನೆ.

ನಂತರ ಅದೇ ದಿನ ಸೇಡಂ ತಾಲ್ಲೂಕು ತಹಶೀಲ್ದಾರ ಕಚೇರಿಗೆ ಭೇಟಿ ನೀಡಿ ಆರೋಪಿತನ ಹೆಸರಿನಲ್ಲಿ ಆಸ್ತಿಗಳು ಇರುವ ಬಗ್ಗೆ ದಾಖಲೆಗಳನ್ನು ಪೂರೈಸುವಂತೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಪ್ರತಿಯನ್ನು ನಿಪಿಃ 4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.  ನಂತರ ಆರೋಪಿತನ ಗ್ರಾಮದ ವ್ಯಾಪ್ತಿಯ ದುಗನೂರು ಗ್ರಾಮ ಪಂಚಾಯತಿಗೆ ಆರೋಪಿತನ ಹೆಸರಿನಲ್ಲಿ ಆಸ್ತಿಗಳು ಇರುವ ಬಗ್ಗೆ ದಾಖಲೆಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಪ್ರತಿಯನ್ನು ನಿಪಿಃ 5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.  ನಂತರ ಸದರಿ ಗ್ರಾಮ ಪಂಚಾಯತಿಯವರು ಅಂಚೆ ಮೂಲಕ ಆರೋಪಿತನ ಹೆಸರಿನಲ್ಲಿ ಯಾವುದೆ ಆಸ್ತಿ ಇರುವುದಿಲ್ಲ ಎಂದು ವರದಿ ಕಳುಹಿಸಿರುತ್ತಾರೆ. ಸದರಿ

ವರದಿಯನ್ನು ನಿಪಿಃ 6 ಎಂದು  ಗುರುತಿಸಲಾಯಿತು. ಅದೇ ರೀತಿ ತಹಶಿಲ್ದಾರ ಸೇಡಂರವರೂ ಸಹ ಅಂಚೆ ಮೂಲಕ ನಮ್ಮ ಠಾಣೆಗೆ ಆರೋಪಿತನ ಹೆಸರಿನಲ್ಲಿ ಯಾವುದೆ ಆಸ್ತಿ ಇರುವುದಿಲ್ಲ ಎಂದು ವರದಿ ಕಳುಹಿಸಿರುತ್ತಾರೆ. ಸದರಿ ವರದಿಯನ್ನು ನಿಪಿಃ 7 ಎಂದು  ಗುರುತಿಸಲಾಯಿತು. ಎಲ್ಲ ದಾಖಲೆಗಳೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ  ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ